# ಭೂಸುಧಾರಣೆ ಕಾಯ್ದೆಗಳು ಮತ್ತು ಕರ್ನಾಟಕ

**ಶಿವರಾಜ**

ಅರ್ಥಶಾಸ್ತ್ರ ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಇರಕಲ್‌ಗಡ, ಕೊಪ್ಪಳ.

**Received: 15/09/2024 ; Acepted: 02/10/2024 ; Published: 05/11/2024**

**DOI: https://doi.org/10.5281/zenodo.14035442**

## ABSTRACT:

ಭಗತ್‌ಸಿಂಗ್ ಹೇಳಿರುವಂತೆ ರಾಷ್ಟ್ರೀಯತೆಯು ಹೇಗಿರಬೇಕೆಂದರೆ "ವಸಾಹತುಶಾಹಿಯೇ ಆಗಿರಲಿ, ಪ್ರಜಾಸತ್ತಾತ್ಮಕ ಮಾದರಿಯೇ ಆಗಿರಲಿ ಅದು ದೇಶದ ಸಂಪತ್ತಿನ ಲೂಟಿಯನ್ನು ಅಂತ್ಯಗೊಳಿಸುವಂತಿರಬೇಕು. ಕರ್ನಾಟಕದಲ್ಲಿ ಭೂಮಿ ಮತ್ತು ಕೃಷಿ ಕಾಯ್ದೆ-ಕಾನೂನುಗಳಿಗೆ ರೈತರಿಂದ ಪ್ರತಿರೋಧದ ಹೋರಾಟಗಳಿಲ್ಲದೆ ಅವುಗಳನ್ನು ಒಪ್ಪಿಕೊಂಡು ತಮ್ಮ ದಿನನಿತ್ಯದ ಕೃಷಿ ಚಟುವಟಿಕೆಯಲ್ಲಿ ನಿರತರಾಗಿರುತ್ತಾರೆ. ಇದಕ್ಕೆ ಕಾರಣ ಅವರುಗಳು ಬೆಳೆದಿರುವ ಬೆಳೆಯನ್ನು ಸೂಕ್ತ ಬೆಲೆಗೆ ಮಾರಾಟ ಮಾಡುವುದಾಗಿರುತ್ತದೆ. ಭೂ ಬಳಕೆಗೆ ಸಂಬಂಧಿತ ಭೂ ಸುಧಾರಣೆ ಕಾಯ್ದೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ರೂಪಿಸಿ ಜಾರಿಗೆ ತಂದಿರುತ್ತವೆ. ಇದರಿಂದ ರೈತರಿಗೆ ಮತ್ತು ಕೃಷಿಯಲ್ಲಿ ನಿರತರಾದವರಿಗೆ ಆಗುತ್ತಿರುವ ಸಾಧಕ-ಬಾಧಕಗಳನ್ನು ಕೇವಲ ವರಮಾನ, ಬಂಡವಾಳ ಮತ್ತು ಆರ್ಥಿಕ ನೆಲೆಗಳಲ್ಲಿ ವಿವೇಚಿಸದೆ ಅಲ್ಲಿನ ಭೂಸಂಬಂಧಗಳು, ಚಾರಿತ್ರಿಕ, ಸಾಮಾಜಿಕ, ರಾಜಕೀಯ ನೆಲೆಗಳಿಂದ ನೋಡುವುದು ಅವಶ್ಯಕವಾಗಿದೆ.

## KEYWORDS:

ಜಾತಿ ಪದ್ಧತಿ, ವಸಾಹತು ಕಾಲಘಟ್ಟ, ಭೂ ಒಡೆತನ, ಏಕೀಕರಣ ಚಳುವಳಿ, 1974ರ ಭೂಸುಧಾರಣಾ ಕಾಯ್ದೆ.

**ಜಾತಿ ವ್ಯವಸ್ಥೆ ಮತ್ತು ಭೂ ಸುಧಾರಣೆಗಳು:** ಭೂ ಸುಧಾರಣೆ ಕಾಯ್ದೆ ಸಾಮಾಜಿಕ ವರ್ಣ ವ್ಯವಸ್ಥೆಯೊಂದಿಗೆ ನೇರ ಸಂಬಂಧವಿದೆ. ಭಾರತದ ಸಾಮಾಜಿಕ ವ್ಯವಸ್ಥೆಯು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಚಾತುರ್ವರ್ಣದಿಂದ ಕೂಡಿದ್ದು, ಬ್ರಾಹ್ಮಣನು ಅಧ್ಯಯನ-ಅಧ್ಯಾಪನ, ಕ್ಷತ್ರಿಯನು ಆಡಳಿತ-ಯುದ್ಧ ಕಲೆಗಳಿಗೆ, ವೈಶ್ಯನು ಬೇಸಾಯ ಮತ್ತು ವ್ಯಾಪಾರ, ಶೂದ್ರ ಕಾರ್ಮಿಕ ವರ್ಗ. ಇವುಗಳನ್ನು ಅವಲೋಕಿಸಿದಾಗ ಭೂಮಿಯ ಒಡೆತನ ನೇರವಾಗಿ ವ್ಯವಸಾಯಗಾರನಾದ ವೈಶ್ಯನಿಗೆ ಸೇರಬೇಕಾಗಿತ್ತು. ಆದರೆ ಸಾಮ್ರಾಜ್ಯದ ಸಮಸ್ತ ಭೂಮಿ ಅರಸನದಾಗಿದ್ದವೂ. ಭೂಮಿಯ ಒಡೆತನದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಆದಾಯ ಬರುತ್ತಿತ್ತು. ರಾಜ್ಯದ ಸಂಪೂರ್ಣ

ಭೂ ಒಡೆತನ ರಾಜನ ಹೆಸರಿನಲ್ಲಿಯೇ ಇದ್ದರೂ ಆ ಭೂಮಿಯನ್ನು ಉಳುವವರು ವೈಶ್ಯರು (ಅಂದರೆ ರೈತರು), ಶೂದ್ರರು ಕೂಲಿ ಕಾರ್ಮಿಕರಾಗಿರುತ್ತಿದ್ದರು. ಆದರೆ ಭೂ ಕಂದಾಯ, ಗೇಣಿ, ಭೂ ಹಕ್ಕುದಾರಿಕೆಗೆ ಸಂಬಂಧಿಸಿದ ಎಲ್ಲಾ ಕಾಯ್ದೆ ಕಾನೂನುಗಳನ್ನು ರಚಿಸುವವರು, ರಾಜನ ಆಸ್ಥಾನದಲ್ಲಿದ್ದ ದೇಸಾಯಿ, ದೇಶಮುಖ್, ಜಹಾಂಗೀರ್‌ದಾರ್, ಇನಾಂದಾರ್, ಪುರೋಹಿತರು ಬ್ರಾಹ್ಮಣರಾಗಿದ್ದರು. ಇವರು ಭೂಮಿಯ ಹಕ್ಕುದಾರಿಕೆಗೆ ಸಂಬಂಧಿಸಿದಂತೆ ನಿಯಮಗಳನ್ನು ರೂಪಿಸುವಾಗ ದೇವರು, ಧರ್ಮ ಮತ್ತು ದಾನದ ಹೆಸರಿನಲ್ಲಿ ಕ್ಷತ್ರಿಯರಿಂದ ದೇವಾದಾಯ, ಬ್ರಹ್ಮದಾಯ ಮತ್ತು ಸೇವಾದಾಯದ ರೂಪವಾಗಿ ಭೂಮಿಯ ಮೇಲೆ ಹಕ್ಕನ್ನು ಸಾಧಿಸುವ ಶಾಸನಗಳನ್ನು ಬರೆಸುತ್ತಿದ್ದರು. ಉದಾಹರಣೆ, ದೇವರು ಮತ್ತು ಬ್ರಾಹ್ಮಣರಿಗೆ ಸೇರಿದ ಆಸ್ತಿಯನ್ನು ಪಡೆದುಕೊಂಡರೆ ಅಂತಹ ಪಾಪಿಗಳು ಬೇರೆ ಲೋಕದ ಹದ್ದಿನ ಎಂಜಲು ತಿಂದು ಜೀವಿಸಬೇಕಾಗುತ್ತದೆ (ಶಿಕಾರಿಪುರ ಬಾಳುಬೀಡು ಶಾಸನ). ಈ ಧರ್ಮ ಪಾಲಿಸಿದವರಿಗೆ ವಾರಣಾಸಿಯಲ್ಲಿ ಸಹಸ್ರ ಗೋವುಗಳನ್ನು ಬ್ರಾಹ್ಮಣರಿಗೆ ಕೊಟ್ಟ ಫಲ, ಕೆಡಿಸಿದವರಿಗೆ ಸಹಸ್ರ ಗೋವುಗಳನ್ನು, ಕೋಟಿ ಬ್ರಾಹ್ಮಣರನ್ನು ಕೊಂದ ದೋಷ. ತಾನು ದಾನ ಮಾಡಿದ ಭೂಮಿಯನ್ನು ಕಿತ್ತುಕೊಂಡರೆ ನರಕದಲ್ಲಿ 60,000 ವರ್ಷಗಳ ಕಾಲ ಕ್ರಿಮಿಯಾಗಿ ಬಾಳಬೇಕಾಗುತ್ತದೆ (ಹೊಯ್ಸಳ ಎರಡನೆ ಬಲ್ಲಾಳನು ಕ್ರಿ.ಶ. 1086ರ ಬ್ರಾಹ್ಮಣ ಭೂಮಿ ದಾನದ ಶಾಸನ). ಇಂತಹ ಶಾಸನಗಳಿಂದಾಗಿ ರಾಜ್ಯದಲ್ಲಿ ಬ್ರಹ್ಮಪುರಿ, ಶಿವಪುರ, ಅಗ್ರಹಾರಗಳು ಅಸ್ತಿತ್ವ ಪಡೆದುಕೊಂಡವು. ಕ್ರಮೇಣ ಬ್ರಾಹ್ಮಣರೇ ಗ್ರಾಮವನ್ನು ನಿಯಂತ್ರಿಸುತ್ತಿದ್ದರು ಮತ್ತು ಸಾವಿರಾರು ಎಕರೆಗಳ ಭೂಮಿ ಒಡೆತನವನ್ನು ಹೊಂದಿದ್ದರು. ಈ ಪದ್ಧತಿಯನ್ನು ಇನಾಂ ಭೂ ಪದ್ಧತಿ ಮತ್ತು ಜಹಂಗಿರು ಪದ್ಧತಿ ಎನ್ನಲಾಗಿದೆ.

**ಬ್ರಿಟಿಷ್ ವಸಾಹತು ಕಾಲಘಟ್ಟ:** ಭೂಮಿಯ ಒಡೆತನ ಮತ್ತು ಕಂದಾಯ ಪದ್ಧತಿಗಳು ಕಂಪನಿ ಸರ್ಕಾರಕ್ಕೆ ಹಾಲು ಕೊಡುವ ಹಸುವಿನಂತೆ. ಈಗಾಗಲೆ ಅಕ್ಷರ ಜ್ಞಾನವನ್ನು ಪಡೆದಿದ್ದ ಮತ್ತು ಗ್ರಾಮದಲ್ಲಿ ನಾಡಗೌಡ, ಶಾನಭೋಗ, ಕುಲಕರ್ಣಿ, ದೇಸಾಯಿ ಹೆಸರಿನಲ್ಲಿ ರಾಜಾಡಳಿತದಲ್ಲಿ ಭೂ ಒಡೆತನವನ್ನು ಸಾಧಿಸಿದ್ದ ಸ್ಪರ್ಶ ಮೇಲುವರ್ಗವು ಬ್ರಿಟಿಷ್ ಆಡಳಿತಕ್ಕೆ ಒತ್ತಾಸೆಯಾಗಿ ನಿಂತಿತ್ತು. ಬ್ರಿಟಿಷರು ರೂಪಿಸಿ ಜಾರಿಗೆ ತಂದಿರುವ ಭೂ ಒಡೆತನದ ಖಾಯಂಗುತ್ತಾ ಪದ್ಧತಿ, ಮಹಲ್ವಾರಿ ಪದ್ಧತಿ, ರೈತವಾರಿ ಪದ್ಧತಿಗಳು ಹೆಚ್ಚು ಕಂದಾಯ, ಗೇಣಿ ವಸೂಲಿ ಮಾಡಿಕೊಡುವವರಿಗೆ ಭೂ ಒಡೆತನ ನೀಡುವ ರಚನೆಗೆ ಭದ್ರ ಬುನಾದಿಯಾದವು. ಇವುಗಳು ರೈತನನ್ನು ಹೆಚ್ಚು ದುಡಿಯುವಂತೆ ಮತ್ತು ಭೂ ಕಂದಾಯವನ್ನು ಸಂದಾಯ ಮಾಡುವಂತೆ ಪೀಡಿಸುವಲ್ಲಿ ಸರ್ಕಾರ ಮತ್ತು ಮಧ್ಯವರ್ತಿಗಳು ಒತ್ತಡವನ್ನು ಹೇರಿದವು. ಇದೇ ಸಂದರ್ಭದಲ್ಲಿ ಕ್ರಿ.ಶ, 1857ರ ಸಿಪಾಯಿ ದಂಗೆಯ ಹೋರಾಟದ ಕಿಚ್ಚು ಜನರ ಸಂಘಟನೆ, ರೈತ ಮತ್ತು ಬುಡಕಟ್ಟು

ಜನರ ಭೂ ಸಂಬಂಧಿತ ಹೋರಾಟಗಳ ವಿಚಾರವಾಗಿ ಕಂಪನಿ ಸರ್ಕಾರ ಜಾರಿಗೆ ತಂದ ಕೆಲವು ಸಾಮಾಜಿಕ ಶಿಕ್ಷಣ ಆರ್ಥಿಕ ಕಾಯ್ದೆಗಳಾದ ಬಲವಂತದ ದುಡಿಮೆ ನಿಷೇಧ ಕಾಯ್ದೆ, ಗುಲಾಮಗಿರಿ ಪದ್ಧತಿ ನಿಷೇಧ, ಸಾರ್ವತ್ರಿಕ ಶಿಕ್ಷಣ ಕಾಯ್ದೆ, ತಳ ವರ್ಣಗಳ ಸ್ಪರ್ಶ ಜಾತಿ ಜನರನ್ನು ವಿಚಾರವಂತರನ್ನಾಗಿಸಿದವು. ಇದರ ಫಲವಾಗಿ ಭೂ ಒಡೆತನಕ್ಕೆ ಸಂಬಂಧಿಸಿದ ಮತ್ತು ಕೂಲಿ, ಗೇಣಿ, ದುಡಿಯುವ ಸಮಯ ಮುಂತಾದ ವಿಷಯಗಳಲ್ಲಿ ಬದಲಾವಣೆಗಳಿಗೆ ದಾರಿ ಮಾಡಿಕೊಳ್ಳಲಾಯಿತು.

ಕರ್ನಾಟಕವೂ ಇದಕ್ಕೇನು ಹೊರತಾಗಿರಲಿಲ್ಲ. ಆಗಿನ ಮೈಸೂರು ಪ್ರಾಂತ್ಯವು ದೇಶದಲ್ಲಿ ಪ್ರಥಮವಾಗಿ ಕ್ರಿ.ಶ. 1881ರಲ್ಲಿ ಪ್ರಜಾಪ್ರತಿನಿಧಿ ಕಾಯ್ದೆಯನ್ನು ಜಾರಿಗೊಳಿಸಿತು. ಕ್ರಿ.ಶ 1918ರಲ್ಲಿ ಮೈಸೂರು ಸರ್ಕಾರ ರೂಪಿಸಿದ ಜ. ಮಿಲ್ಲರ್ ಸಮಿತಿಯು ಬ್ರಾಹ್ಮಣರೇತರರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವಂತೆ ಶಿಫಾರಸ್ಸು ಮಾಡಿತು. ಇದರ ಫಲವಾಗಿ ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಬ್ರಾಹ್ಮಣೇತರ ತಳಸಮಾಜದ ಸ್ಪರ್ಶ ಜಾತಿಗಳಾದ ಒಕ್ಕಲಿಗರು, ಲಿಂಗಾಯತರು ಮುಂಚೂಣಿ ರಾಜಕೀಯ ನಾಯಕರಾಗಿ ಹೊರಹೊಮ್ಮಿದರು. ಸಂವಿಧಾನ ಜಾರಿಗೆ ಬಂದ ನಂತರ ಕ್ರಿ.ಶ. 1951–52ರಲ್ಲಿ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಗಳಲ್ಲಿ ಸ್ವಾತಂತ್ರ್ಯ ಚಳುವಳಿ ಮತ್ತು ಏಕೀಕರಣ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದ ಭೂಮಿಯನ್ನು ಉಳಿಮೆ ಮಾಡುತ್ತಿದ್ದ ಒಕ್ಕಲಿಗ ಮತ್ತು ಲಿಂಗಾಯತರು ಹೆಚ್ಚು ಸಂಖ್ಯೆಯಲ್ಲಿ ಚುನಾಯಿತರಾಗಿ ವಿಧಾನಸಭೆ ಪ್ರವೇಶಿಸಿದರು. ಇದರ ಫಲವಾಗಿ ಕೆ.ಸಿ.ರೆಡ್ಡಿಯವರು ಕರ್ನಾಟಕದ ಮೊದಲ ಮುಖ್ಯ ಮಂತ್ರಿಯಾಗಿ ಆಯ್ಕೆಯಾದರು. ಅಂಬೇಡ್ಕರ್ ಹೇಳುವಂತೆ ರಾಜಕೀಯ ಸ್ವಾತಂತ್ರ್ಯ ಪಡೆಯುವುದರ ಮೂಲಕ ಇನ್ನುಳಿದ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯಗಳನ್ನು ಸುಲಭವಾಗಿ ಸಾಧಿಸಬಹುದು ಎಂಬುದಕ್ಕೆ ಇದು ಉತ್ತಮ ನಿದರ್ಶನವಾಗಿದೆ.

**ಕರ್ನಾಟಕ ಭೂ ಸುಧಾರಣೆಗಳು:** ಸಂಪತ್ತು ಮತ್ತು ಉತ್ಪಾದನಾ ಸ್ವತ್ತುಗಳು ಸಕಲರಿಗೂ ಸಮಾನವಾಗಿ ಹಂಚಿಕೆಯಾಗುವ ಕ್ರಮದಲ್ಲಿ ಅರ್ಥವ್ಯವಸ್ಥೆಯನ್ನು ನೋಡಿಕೊಳ್ಳಬೇಕಾಗಿತ್ತೂ, ಸಂಪತ್ತು ಮತ್ತು ಉತ್ಪಾದನಾ ಪರಿಕರಗಳು ಕ್ರೋಢಿಕೃತವಾಗಿ ಬಹುದೊಡ್ಡ ಅನ್ಯಯವಾಗಿದ್ದೂ ಇದು ಲಿಂಗ ಅಸಮಾನತೆಗೂ ಕಾರಣವಾಯಿತು. ಸ್ವಂತತ್ರ್ಯ ಕರ್ನಾಟಕದಲ್ಲಿ, ಎಲ್ಲರಿಗೂ ಸೂರು, ಉಳಿಮೆಗೆ ಭೂಮಿಯನ್ನು ಕೊಡುವ ಉದ್ದೇಶ ಹೊಂದಿತ್ತು. ಭೂ ಸುಧಾರಣಗಳು ಸಂವಿಧಾನದ ರಾಜ್ಯಪಟ್ಟಿಯಲ್ಲಿ ಬರುವ ವಿಷಯವಾಗಿದ್ದು, ಅದರ ಕಾಯ್ದೆ ಕಾನೂನುಗಳನ್ನು ರಚಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳು ಹೊಂದಿದ್ದು. ಆ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವೂ ತಮ್ಮದೇ ಆದ ಭೂ ಸುಧಾರಣ ಕಾಯ್ದೆಗಳನ್ನು ರೂಪಿಸಲು ಸಾಧ್ಯವಾಗಿದೆ. ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಭೂ ಸುಧಾರಣೆಗಳನ್ನು ಸೇರಿಸಲಾಗಿದೆ.

ಅಂಬೇಡ್ಕರ್‌ರವರ ದೃಷ್ಟಿಕೋನದಲ್ಲಿ ದೇಶದ ಪ್ರಮುಖ ಉದ್ಯಮಗಳೆಲ್ಲ ಸರ್ಕಾರದ್ದೇ ಆಗಿರಬೇಕು. ಮಿಕ್ಕುದ್ಯಮಗಳೂ ಸರ್ಕಾರದ ಉಸ್ತುವಾರಿಯಲ್ಲಿರಬೇಕು. ಕೃಷಿ ವಲಯವೂ ಸರ್ಕಾರದ ನೇತೃತ್ವದಲ್ಲಿ ಸಹಕಾರಿ ತತ್ವದ ಆಧಾರದಿಂದ ಮುನ್ನಡೆಯಬೇಕು. ಭೂಮಿ ಮತ್ತು ಅಸ್ಥಿತ್ವದಲ್ಲಿರುವ ಉದ್ಯಮಗಳು ಸರ್ಕಾರ ವಶಕ್ಕೆ ಪಡೆಯಬೇಕು ಎಂಬುದಾಗಿತ್ತೂ. ಈ ವಿಚಾರಗಳಿಗೆ ಆಧಾರವಾಗಿ ಸಂವಿಧಾನವು ಭೂಮಿ ಮತ್ತು ಭೂ ಸಂಬಂಧಿತ ಕಾಯ್ದೆ ಕಾನೂನುಗಳನ್ನು ರೂಪಿಸಿಕೊಳ್ಳಲು ದೇಶದ ಜನತೆಗೆ ಅಧಿಕಾರವನ್ನು ನೀಡಿದೆ. ಗ್ರಾಮೀಣ ಭಾರತದ ಮೂಲಭೂತ ಸಮಸ್ಯೆಯಾದ ಭೂಮಿತಿಯಲ್ಲಿನ ಸಮತೆಯನ್ನು ನಿವಾರಿಸಿಕೊಳ್ಳಲು ಕಂಡುಕೊಂಡ ಮೂರು ಮಾರ್ಗಗಳೆಂದರೆ (1) ಶಾಸನಾತ್ಮಕವಾಗಿ ಸರ್ಕಾರ ಎಂದೂ ನೇಗಿಲು ಕಾಣದ ವಿಶಾಲವಾದ ದೇಶಾದ್ಯಂತ ಇರುವ ಬಯಲು ಹುಲ್ಲುಗಾವಲುಗಳಲ್ಲಿ ಗುಡ್ಡಗಾಡುಗಳಲ್ಲಿ ಭೂರಹಿತ ಜನರು ನೆಲಸುವುದಕ್ಕೆ ಅವಕಾಶ ನೀಡಿ ಅವುಗಳಲ್ಲಿ ಕೃಷಿ ಮಾಡಲು ಅವಕಾಶ ಮಾಡಿಕೊಡುವುದು. (2) ಜಮೀನ್ದಾರರು ಸ್ವಯಂ ಪ್ರೇರಿತವಾಗಿ ಜಮೀನು ಭೂಮಿಯನ್ನು ಬಿಟ್ಟುಕೊಡುವುದು (ಭೂದಾನ ಚಳುವಳಿ ವಿನೋಭಾ ಬಾವೆ). (3) ತನಗೆ ದೊರೆತಿರುವ ಭೂಮಿಯನ್ನು ಭೂರಹಿತರ ಹಂಚಿಕೆಗೆ ಸಂಬಂಧಿಸಿದಂತೆ ಕಾಯ್ದೆ-ಕಾನೂನುಗಳ ಭೂಸುಧಾರಣೆಗಳನ್ನು ಜಾರಿಗೆ ತಂದು ಭೂ ಸಮಾನ ಹಂಚಿಕೆಗೆ ಪ್ರಯತ್ನಿಸುವುದು ಆಗಿದೆ. ಸ್ವಾತಂತ್ರ್ಯ ನಂತರ ಭಾರತದಲ್ಲಿ ಹಲವಾರು ರಾಜ್ಯಗಳು ಭೂಸುಧಾರಣೆಗಳ ಮೇಲೆ ಕೆಲವು ಕಾಯ್ದೆಗಳನ್ನು ರೂಪಿಸಿ ಜಾರಿಮಾಡಿವೆ. ಅದರಲ್ಲಿ ಕರ್ನಾಟಕ ರಾಜ್ಯವು ಜಾರಿಗೆ ತಂದಿರುವ ಕಾಯ್ದೆಗಳನ್ನು ನೋಡುವುದಾದರೆ. ಕ್ರಿ.ಶ. 1955ರ ಇನಾಂ ರದ್ಧತಿ ಕಾಯ್ದೆ, ಕ್ರಿ.ಶ. 1961ರ ಭೂ ಸುಧಾರಣಾ ಕಾಯ್ದೆ. ಕ್ರಿ.ಶ. 1974ರ ಭೂ ಸುಧಾರಣಾ ಕಾಯ್ದೆ ಪ್ರಮುಖವಾಗಿವೆ.

**ಇನಾಂ ರದ್ದತಿ ಕಾಯ್ದೆ:** ಇನಾಂ ಭೂಮಿಯು ರಾಜಪ್ರಭುತ್ವದ ಸ್ವತ್ತಾಗಿದ್ದೂ, ಇದರಲ್ಲಿ ದೇವಾದಾಯ, ಬ್ರಹ್ಮಾದಾಯ, (ಅಗ್ರಹಾರ) ಸೇವಾದಾಯ ಎಂಬ ಮೂರು ವಿಧದ ಇನಾಂ ಭೂಮಿಗಳಿವೆ. ಅವುಗಳನ್ನು ಖಾಸಗಿ ಇನಾಂ ಮತ್ತು ಧರ್ಮ ದೇವರ ಇನಾಂ ಎಂದು ಎರಡು ರೂಪಗಳಲ್ಲಿ ವಿಂಗಡಿಸಬಹುದು. ಬ್ರಹ್ಮದಾಯದ ಹೆಸರಿನಲ್ಲಿ ನೀಡಲಾಗುತ್ತಿದ್ದ ಇನಾಂ ಭೂಮಿಯು ಇಡೀ ಒಂದು ಹಳ್ಳಿ ಇಲ್ಲವೆ ಹಲವು ಹಳ್ಳಿಗಳ ವ್ಯಾಪ್ತಿಯನ್ನು ಹೊಂದಿದ್ದು ಭೂ ಒಡೆತನವನ್ನು ಅನುಭವಿಸುವ ಅಧಿಕಾರ ಬ್ರಾಹ್ಮಣರಿಗೆ ನೀಡಲಾಗುತ್ತಿತ್ತು. ದೇವಾದಾಯದ ಇನಾಂ ಭೂಮಿಯು ದೇವಾಲಯದ ಅರ್ಚಕರಾಗಿದ್ದ ಮೇಲ್ವರ್ಗಗಳ ಅಧೀನದಲ್ಲಿರುತ್ತಿತ್ತು. ಈ ಭೂಮಿಯ ಒಡೆತನವು ದೇವಾಲಯಕ್ಕೆ ಒಳಪಟ್ಟಿದ್ದರೂ ರಾಜ ಪ್ರಭುತ್ವಕ್ಕೆ ಯಾವುದೇ ರೀತಿಯ ಕಂದಾಯದಿಂದ ವಿಮುಕ್ತಿಯನ್ನು ಹೊಂದಿರುತ್ತಿತ್ತು. ಇನ್ನು ಸೇವಾದಾಯದ ಹೆಸರಿನಲ್ಲಿದ್ದ ಇನಾಂ ಭೂಮಿಯನ್ನು ಗ್ರಾಮದಲ್ಲಿ ವಿವಿಧ ಸೇವೆ ಮಾಡುತ್ತಿದ್ದ ಅಗಸ, ಅಂಬಿಗ, ಪಲ್ಲಕ್ಕಿ,

ಅಂಚೆ, ತಳವಾರಿಕೆ, ಸಂಗೀತ ಮುಂತಾದ ಸೇವೆಸಲ್ಲಿಸುತ್ತಿದ್ದ ಇತರೆ ಜಾತಿಯವರಿಗೆ 1 ರಿಂದ 3 ಎಕರೆಗಳಷ್ಟು ಕಂದಾಯ ವಸೂಲಿ ಭೂಮಿಯನ್ನು ನೀಡಲಾಗುತ್ತಿತ್ತು. ಬ್ರಹ್ಮಾದಾಯ ಮತ್ತು ಸೇವಾದಾಯದ ಹೆಸರಿನಲ್ಲಿದ್ದ ಇನಾಂ ಸಾವಿರಾರು, ನೂರಾರು ಎಕರೆಗಳಷ್ಟಿರುತ್ತಿತ್ತು ಆದರೆ ಇವರೆಲ್ಲರೂ ಗೈರುಹಾಜರಿ ಭೂ ಒಡೆಯರಾಗಿದ್ದು, ತಳ ವರ್ಗವಾದ ಶೂದ್ರರು ಭೂಮಿಯನ್ನು ಉಳಿಮೆ ಮಾಡುತ್ತಿದ್ದರು. ಇವರಿಗೆ ಭೂಮಿಯ ಒಡೆತನ ಲಭ್ಯವಿರುವುದಿಲ್ಲ. ಇಂತಹ ಎಲ್ಲಾ ಇನಾಂ ಭೂಮಿಯನ್ನು ರದ್ದು ಗೊಳಿಸಿದ ಪ್ರಯುಕ್ತ ಹೆಚ್ಚು ಭೂಮಿ ಹೊಂದಿದ್ದ ಬ್ರಾಹ್ಮಣರು ಭೂಮಿಯ ಒಡೆತನವನ್ನು ಕಳೆದುಕೊಂಡರು. ಅವರ ಅನುಪಸ್ಥಿತಿಯಲ್ಲಿ ಗೇಣಿಗಾಗಿ ಭೂ ಉಳಿಮೆ ಮಾಡುತ್ತಿದ್ದ ಸ್ಪರ್ಶ ಜಾತಿಗಳು ಅದರಲ್ಲಿಯೂ ಒಕ್ಕಲಿಗರು ಮತ್ತು ಲಿಂಗಾಯಿತರು ಹೆಚ್ಚಿನ ಸಂಖ್ಯೆಯಲ್ಲಿ ಭೂ ಒಡೆತನವನ್ನು ಪಡೆಯುವಂತಾದರು.

**1961ರ ಭೂಸುಧಾರಣೆ ಕಾಯ್ದೆ:** ಈ ಕಾಯ್ದೆ ಗೇಣಿ ನಿರ್ಮೂಲನೆ ಕಾಯ್ದೆಯಾಗಿದೆ. ಇದರ ಪ್ರಮುಖ ಲಕ್ಷಣಗಳೆಂದರೆ, ಈ ಹಿಂದೆ ಕರ್ನಾಟಕದಲ್ಲಿದ್ದ ಪ್ರಾಂತ್ಯವಾರು ಗೇಣಿ ಕಾಯ್ದೆಗಳನ್ನು ರದ್ದುಗೊಳಿಸಿ ಸಂಪೂರ್ಣ ರಾಜ್ಯಕ್ಕೆ ಅನ್ವಯವಾಗುವಂತೆ ಒಂದೇ ಮಾದರಿಯ ಭೂಸುಧಾರಣಾ ಕಾನೂನನ್ನು ನಿಗದಿಪಡಿಸಿತು. ಮತ್ತು ಭೂ ಸೈನಿಕರು, ಸಿಮೆನ್‌ಗಳು, ಅಪ್ರಾಪ್ತರು, ವಿಧವೆಯರು ಅಂಗವಿಕಲರು, ಸಣ್ಣಹಿಡುವಳಿದಾರರು ಹೊರತು ಪಡಿಸಿ ಉಳಿದವರು ಭೂಮಿಯನ್ನು ಗೇಣಿಗೆ ನೀಡುವಂತಿರಲಿಲ್ಲ. ಮತ್ತು ಭೂ ಒಡೆಯನು ಗೇಣಿಗೆ ನೀಡುವ ಮುನ್ನ ಗೇಣಿಗೆ ನೀಡುವ ಭೂಮಿಯನ್ನು ಸರ್ಕಾರ ತನ್ನ ವಶಕ್ಕೆ ಪಡೆದು ಗೇಣಿದಾರನಿಗೆ ನೀಡುವ ಹೊಸ ನಿಯಮವನ್ನು ಸೇರ್ಪಡೆ ಮಾಡುವುದರ ಮೂಲಕ ಭೂಮಿಯ ಒಡೆತನ ಸರ್ಕಾರಕ್ಕೆ ಸೇರಿದ್ದು ಎಂಬ ಸಂದೇಶವನ್ನು ಸಾರಿತು. ಹಾಗೂ ಗೇಣಿದಾರನು ಕೊಡಬೇಕಾಗಿರುವ ಗೇಣಿಯು ನೀರಾವರಿ ಪ್ರದೇಶದಲ್ಲಿ ಉತ್ಪನ್ನದ ಶೇ.25ರಷ್ಟು, ಒಣಭೂಮಿ ಪ್ರದೇಶದಲ್ಲಿ ಉತ್ಪನ್ನದ ಶೇ.20ರಷ್ಟು ಗೇಣಿ ನಿಗದಿಪಡಿಸಿತ್ತು. ಭೂಮಾಲೀಕನು ಸ್ವಂತ ಇಚ್ಛೆಯಿಂದ ಉಳುಮೆ ಮಾಡಲು ಬಂದಾಗ, ಗೇಣಿದಾರನು ಗೇಣಿ ನೀಡಲು ವಿಫಲನಾದಾಗ ಅನಧಿಕೃತವಾಗಿ ಒಳಗುತ್ತಿಗೆ ನೀಡಿದಾಗ ಅಥವಾ 2 ವರ್ಷಕ್ಕಿಂತ ಹೆಚ್ಚು ಸಮಯ ಬೇಸಾಯ ಮಾಡದಿದ್ದಾಗ ಉಗ್ರಾಣ, ಕೈಗಾರಿಕೆ, ವಸತಿ ಮುಂತಾದ ಕೃಷಿಯೇತರ ಉದ್ದೇಶಗಳಿಗೆ ಭೂಮಿಯ ಅವಶ್ಯಕತೆಯಿರುವಾಗ ಗೇಣಿಗೆ ನೀಡಿದ ಅರ್ಧ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬಹುದು. ಅಂದರೆ ಗೇಣಿದಾರನನ್ನು ಭೂ ರಹಿತನಾಗದಂತೆ ಮತ್ತು ಅವನ ಜೀವನ ಸಾಗಿಸಲು ಅವಶ್ಯವಿರುವಷ್ಟು ಭೂಮಿಯನ್ನು ಬಿಟ್ಟು ಉಳಿದ ಭೂಮಿಯನ್ನು ಮರು ವಶಪಡಿಸಿಕೊಳ್ಳಲು ಅವಕಾಶ ನೀಡಿದೆ. ಹಾಗೂ ಕೃಷಿಕ ಮತ್ತು ಕೃಷಿ ಕಾರ್ಮಿಕರಲ್ಲದವರು ಕೃಷಿ ಭೂಮಿ ಹೊಂದುವುದನ್ನು ನಿಷೇಧಿಸಿದ್ದೂ ಸ್ವ ಇಚ್ಛೆಯಿಂದ

ಕೃಷಿ ಮಾಡುವ ಉದ್ದೇಶವಿದ್ದವರು ಕನಿಷ್ಠ 5 ವರ್ಷಗಳು ಕೃಷಿ ಮಾಡುವ ಷರತ್ತಿನೊಂದಿಗೆ ಭೂಮಿ ಹೊಂದುವುದಕ್ಕೆ ಅನುಮತಿ ನೀಡಿದೆ. ಅಂದರೆ 5 ಜನರಿರುವ ಕುಟುಂಬವೊಂದು ಮಳೆಯಾಶ್ರಿತ ಭೂಮಿಯಾದರೆ ಗರಿಷ್ಠ 216 ಎಕರೆಗಳು, 5ಕ್ಕಿಂತ ಹೆಚ್ಚು ಜನರಿರುವ ಕುಟುಂಬವಾದರೆ ಪ್ರತಿ ಸದಸ್ಯರಿಗೂ ನಿರ್ದಿಷ್ಟ ಪ್ರಮಾಣದ ಭೂಮಿ ಹೊಂದುವ ಅವಕಾಶ ನೀಡಿ 432 ಎಕರೆ ಭೂಮಿ ಹೊಂದುವುದಕ್ಕೆ ಅವಕಾಶ ನೀಡಿತು. ಹಾಗೆಯೇ ನೀರಾವರಿಯಾದರೆ 5 ಜನರಿರುವ ಒಂದು ಕುಟುಂಬ ಗರಿಷ್ಠ 27 ಎಕರೆ, 5 ಕ್ಕಿಂತ ಹೆಚ್ಚು ಜನರಿರುವ ಕುಟುಂಬ 54 ಎಕರೆ ಭೂಮಿ ಹೊಂದುವ ಅವಕಾಶ ನೀಡಿದೆ. ಆದರೆ ಈ ಭೂಮಿತಿಯನ್ನು ಈ ಕೆಳಗಿನ ಸಂದರ್ಭಗಳಲ್ಲಿ ತೆಗೆದು ಹಾಕಿದೆ. ಮೊದಲನೇಯದ್ದೂ ಟೀ, ಕಾಫಿ, ರಬ್ಬರ್, ಏಲಕ್ಕಿ, ಮೆಣಸು ತೋಟಗಳು. ಎರಡನೇಯದ್ದೂ, ಶೈಕ್ಷಣಿಕ, ದತ್ತಿ ಮತ್ತು ಧಾರ್ಮಿಕ, ಸಹಕಾರಿ ಸಂಸ್ಥೆಗಳು. ಮೂರನೇಯದ್ದೂ ಕುದುರೆ ಕಾವಲುಗಳು, ಸಾರ್ವಜನಿಕ ವಾಣಿಜ್ಯ ಸಂಸ್ಥೆಗಳು 1965ಕ್ಕಿಂತ ಹಿಂದೆ ಇದ್ದ ಸಕ್ಕರೆ ಕಾರ್ಖಾನೆಗಳು ನಿಗದಿ ಪಡಿಸಿರುವ ಭೂಮಿಗಿಂತಲೂ ಹೆಚ್ಚು ಭೂಮಿ ಹೊಂದಲು ಅವಕಾಶ ನೀಡಿದೆ. ಏಳನೇಯದ್ದೂ, ನಿಗದಿಪಡಿಸಿರುವ ಭೂಮಿಗಿಂತಲೂ ಹೆಚ್ಚಿರುವ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಭೂರಹಿತ ದಲಿತರಿಗೆ, ಪರಿಶಿಷ್ಟ ಪಂಗಡದವರಿಗೆ ಮತ್ತು ಭೂಮಿ ಕಳೆದುಕೊಂಡ ಗೇಣಿದಾರರಿಗೆ ಹಂಚಲು ಅವಕಾಶ ನೀಡಿದೆ. ಸದರಿ ಕಾಯ್ದೆಯು ಕೃಷಿ ಕೂಲಿಗಳನ್ನು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರನ್ನು ಭೂಮಿಯ ಹಕ್ಕಿನಿಂದ ಹೊರಗಿಡುವ ಪ್ರಯತ್ನವನ್ನು ಯತಾ ರೀತಿಯಾಗಿ ಕಾಯ್ದುಕೊಂಡಿದೆ. ಕಾರಣ ಒಂದು ಕುಟುಂಬವನ್ನು ಅರ್ಥೈಸುವಾಗ ಗಂಡ–ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳನ್ನು ಒಳಗೊಂಡಿರುವುದು ಈ ಕುಟುಂಬವು ಹೊಂದಬಹುದಾದ ಗರಿಷ್ಠ ಮಿತಿ ನೀರಾವರಿಯಾದರೆ 54 ಎಕರೆ, ಒಣಭೂಮಿಯಾದರೆ 423 ಎಕರೆ. ಇಲ್ಲಿ, ಗಮನಿಸಬೇಕಾದ ಒಂದು ಅಂಶವೆಂದರೆ ಅದೇ ಕುಟುಂಬದ ಪ್ರಾಪ್ತರು, ವಿಧವೆಯರು ಮತ್ತೊಂದು ಕುಟುಂಬದ ಹೆಸರಿನಲ್ಲಿ ಕನಿಷ್ಠ 27 ಎಕರೆ ನೀರಾವರಿ ಮತ್ತು 216 ಎಕರೆ ಒಣಭೂಮಿ ಹೊಂದುವ ಅವಕಾಶ ನೀಡಿದೆ. ಈ ವಿಧಾನವು ಭೂ ಮಾಲೀಕರು ಹೆಚ್ಚುವರಿ ಭೂಮಿಯನ್ನು ತಮ್ಮದೇ ಕುಟುಂಬದ ಸದಸ್ಯರಲ್ಲಿ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟಿತು.

ಭೂ ಸುಧಾರಣಾ ಕಾಯ್ದೆಯ ವಿಫಲತೆಗೆ ಮುಖ್ಯ ಕಾರಣ ಆಗಿನ ರಾಜ್ಯ ರಾಜಕೀಯದ ಮುಂದಾಳುಗಳು ಮತ್ತು ಆಡಳಿತದ ಚುಕ್ಕಾಣಿ ಹಿಡಿದವರು ಇನಾಂ ಭೂಮಿಯನ್ನು ತಮ್ಮ ವಶಕ್ಕೆ ಪಡೆದಿದ್ದ ಸ್ಪರ್ಶಜಾತಿಗಳ ಮುಂಚೂಣಿ ಜಮೀನ್ದಾರರು ಶೇ.65ರಷ್ಟು ಜನಪ್ರತಿನಿಧಿಗಳು ವಿಧಾನಸಭೆ ಪ್ರವೇಶ ಪಡೆದಿದ್ದರು. ಅವರು ಅಲ್ಲಿ ಕುಳಿತು ಕಾನೂನು ರೂಪಿಸುವಾಗ ತಮ್ಮ ಮತ್ತು ತಮ್ಮದೇ ಜನರ ಹಿತಾಸಕ್ತಿಗೆ ವಿರುದ್ಧವಾಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಜಾಗರೂಕವಾಗಿ

ಮಾಡಿದರು. ರಾಜ್ಯಾಧಿಕಾರವು ಯಾವ ಜಾತಿ ಜನರ ಪ್ರತಿನಿಧಿಗಳು ಹೆಚ್ಚು ಸಂಖ್ಯೆಯಲ್ಲಿ ವಿಧಾನ ಸಭೆಯನ್ನು ಪ್ರವೇಶಿಸಿದ್ದಾರೆ ಮತ್ತು ಅಧಿಕಾರವನ್ನು ಹೊಂದಿದ್ದಾರೆ ಎಂಬುದರ ಆಧಾರವಾಗಿ ಭೂ ಒಡೆತನದ ಸಂಬಂಧಗಳು ವರ್ಗಾವಣೆಗೊಂಡಿವೆ. ಮತ್ತು ರಾಜ್ಯಾಡಳಿತಕ್ಕೂ ಭೂಮಿ ಮೇಲಿನ ಒಡೆತನಕ್ಕೂ ನೇರವಾದ ಸಂಬಂಧಗಳಿವೆ.

**1974ರ ಭೂಸುಧಾರಣಾ ಕಾಯ್ದೆ:** ಸಂವಿಧಾನದ ಆಶಯದಂತೆ ಭೂರಹಿತರಿಗೆ ಮತ್ತು ಕೂಲಿಕಾರ್ಮಿಕರಿಗೆ ಭೂಮಿ ಒಡೆತನವನ್ನು ನೀಡುವಲ್ಲಿ ವಿಫಲವಾದ ಕಾರಣ ರಾಜ್ಯದ ಭೂರಹಿತ ಜಾತಿ ಜನರಿಗೆ ಭೂಮಿಯನ್ನು ಹಂಚುವ ಉದ್ದೇಶದಿಂದ ಕರ್ನಾಟಕದ ಆಗಿನ ಮುಖ್ಯಮುಂತ್ರಿಗಳಾಗಿದ್ದ ಡಿ.ದೇವರಾಜು ಅರಸು ನೇತೃತ್ವದ ಸರ್ಕಾರ ರಾಜ್ಯದಲ್ಲಿ ಮತ್ತೊಂದು ಭೂಸುಧಾರಣಾ ಕಾಯ್ದೆಯನ್ನು ರೂಪಿಸಿ ಜಾರಿಗೆ ತಂದಿತು. ಅದು "ಉಳುವವನೆ ಭೂಮಿ ಒಡೆಯ" ಆತನಿಗೇ ಅದು ಸೇರತಕ್ಕದೆಂದು ಘೋಷಿಸಿತು. ಆ ಭೂಸುಧಾರಣೆ ಕಾಯ್ದೆಯ ಮುಖ್ಯಾಂಶಗಳು.

1. 1974ರ ಕಾಯ್ದೆ ಪ್ರಕಾರ ಸೈನಿಕರು ಮತ್ತು ಸಿಮೆನ್‌ಗಳು ಹೊರತುಪಡಿಸಿ ಬೇರೆ ಯಾವ ವ್ಯಕ್ತಿಗಳೂ ಭೂಮಿಯನ್ನು ಗೇಣಿಗೆ ಕೊಡುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ.
2. ಕಾನೂನೂನಿಗೆ ವಿರುದ್ಧವಾಗಿ ಯಾರಾದರೂ ಭೂಮಿಯನ್ನು ಗೇಣಿಗೆ ನೀಡುವುದು ಕಂಡುಬಂದರೆ ಅಂತವರ ಭೂಮಿಯನ್ನು ಹೆಚ್ಚುವರಿ ಭೂಮಿಯೆಂದು ಪರಿಗಣಿಸಿ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶ ಮಾಡಿಕೊಟ್ಟಿತು.
3. ಸ್ವಂತ ಕೃಷಿ ಮಾಡುವವರು, ಕುಟುಂಬದ ಸದಸ್ಯರ ಸಹಾಯದಿಂದ ಹಾಗೂ ಕೂಲಿ ಕೊಟ್ಟು ಆಳುಗಳ ನೆರವಿನಿಂದ ಬೇಸಾಯ ಮಾಡುವವರು ಮಾತ್ರ ಭೂಮಿ ಹೊಂದಲು ಅವಕಾಶ ಕಲ್ಪಿಸಿತು.
4. ಈ ಹಿಂದೆ ಗುತ್ತಿಗೆ ನೀಡಿರುವ ಭೂಮಿಯನ್ನು ಪುನರ್ ಸ್ವಾಧೀನ ಪಡಿಸಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಿತು. ಈ ಭೂಮಿಯು ಸರ್ಕಾರದ ಒಡೆತನಕ್ಕೆ ಒಳಪಟ್ಟು ಸದರಿ ಭೂಮಿಯಲ್ಲಿ ಈ ಹಿಂದೆ ಗೇಣಿಗಾಗಿ ವ್ಯವಸಾಯ ಮಾಡುತ್ತಿದ್ದವರು ಗೇಣಿಗೆ ಸಂಬಂಧಿಸಿದ ಘೋಷಣಾ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಿ ಗೇಣಿ ಭೂಮಿಯ ಒಡೆತನವನ್ನು ಪಡೆಯಲು ಅವಕಾಶ ಕಲ್ಪಿಸಿತು.
5. ಘೋಷಣಾ ಪತ್ರದ ಮೂಲಕ ಭೂಮಿ ಪಡೆದುಕೊಳ್ಳಲು ಗೇಣಿದಾರನು ತಾಲೂಕಿನ ಭೂನ್ಯಾಯ ಮಂಡಳಿಯ ಮುಂದೆ ಗೇಣಿ ಹಕ್ಕನ್ನು ಪ್ರತಿಪಾದಿಸಬೇಕಿತ್ತು. ಅದರ ಅಧ್ಯಕ್ಷರು ಸಹಾಯಕ ಕಮಿಷನರ್ ಆಗಿದ್ದು ತಹಶೀಲ್ದಾರರು ಕಾರ್ಯದರ್ಶಿಗಳಾಗಿರುತ್ತಿದ್ದರು. ಕ್ಷೇತ್ರದ ಶಾಸಕರು ಮತ್ತು ಪ.ಜಾ/ಪ.ಪಂಗಡದ ಒಬ್ಬರು ಸಮಿತಿಯ ಸದಸ್ಯರಾಗಿರುತ್ತಿದ್ದರು.
6. ಭೂ ಹಿಡುವಳಿಯ ಗರಿಷ್ಠ ಮಿತಿಗೆ ಸಂಬಂಧಿಸಿದಂತೆ 5 ಜನರಿರುವ ಕುಟುಂಬವೊಂದು 10 ಎಕರೆ ಮತ್ತು ಕುಟುಂಬದ ಸದಸ್ಯರ ಸಂಖ್ಯೆ 5ಕ್ಕಿಂತ ಹೆಚ್ಚಿದ್ದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ 2 ಎಕರೆಯಂತೆ ಗರಿಷ್ಠ 20 ಎಕರೆ ಭೂಮಿಯನ್ನು ಹೊಂದಲು ಅವಕಾಶ ಕಲ್ಪಿಸಿತು. ಕುಟುಂಬದ ವ್ಯಾಖ್ಯಾನದಂತೆ ಗಂಡ-ಹೆಂಡತಿ ಮತ್ತು ಅಪ್ರಾಪ್ತ ಮಕ್ಕಳನ್ನು ಪ್ರತಿನಿಧಿಸುತ್ತದೆ. ಆದರೆ ಅದೇ ಕುಟುಂಬದ ಪ್ರಾಪ್ತ ಮಕ್ಕಳು ಹಾಗೂ ವಿಧವೆ ತಾಯಿ ಇದ್ದರೆ ಅವರನ್ನು ಇನ್ನೊಂದು

ಕುಟುಂಬವೆಂದು ಪರಿಗಣಿಸುತ್ತದೆ.

7. ಕುಟುಂಬದ ಗರಿಷ್ಠ ಮಿತಿಯನ್ನು ನಿಗದಿ ಪಡಿಸುವಾಗ ಸರ್ಕಾರಿ ನೀರಿನಿಂದ ನೀರಾವರಿ ಮಾಡುವುದಾದರೆ 10 ಎಕರೆ ಮಳೆ ನೀರಿನಿಂದ ಕೃಷಿ ನೀರಾವರಿ ಮಾಡಿದರೆ 20 ಎಕರೆ, ಒಣ ಭೂಮಿಯಾದರೆ 40 ಎಕರೆ ಭೂಮಿಯನ್ನು ಹೊಂದಲು ಅವಕಾಶ ನೀಡಿದೆ. ಉಳಿದ ಹೆಚ್ಚುವರಿ ಭೂಮಿಯನ್ನು ಘೋಷಿಸಿಕೊಳ್ಳುವುದರ ಮೂಲಕ ಸರ್ಕಾರದ ಸ್ವಾಧೀನಕ್ಕೆ ಬಿಟ್ಟುಕೊಡಲು ನಿಯಮ ರೂಪಿಸಿತು. ಹೆಚ್ಚುವರಿ ಭೂಮಿ ಘೋಷಿಸಿಕೊಳ್ಳಲು ನಿರಾಕರಿಸಿದರವರಿಗೆ ಜುಲ್ಮಾನೆ ವಿಧಿಸುವುದನ್ನು ಈ ಕಾಯ್ದೆ ಒಳಗೊಂಡಿದೆ.
8. ಹೆಚ್ಚುವರಿಯಾಗಿ ಘೋಷಿಸಿಸಲಾದ ಭೂಮಿಯಲ್ಲಿ ಶೇ.50ರಷ್ಟು ಭೂಮಿಯನ್ನು ಪ.ಜಾ ಮತ್ತು ಪ.ಪಂಗಡದವರಿಗೆ ಉಳಿದ ಶೇ.50ರಷ್ಟು ಭೂಮಿಯನ್ನು ಹಿಂದುಳಿದ ವರ್ಗದ ಭೂರಹಿತ ರೈತರಿಗೆ ಮತ್ತು ಕೃಷಿಕಾರ್ಮಿಕರಿಗೆ ನಿಗದಿತ ಕಾಲಾವಧಿಯಲ್ಲಿ ವಿತರಿಸಲು ಅವಕಾಶ ನೀಡಿತು.
9. ಶಿಕ್ಷಣ, ಧಾರ್ಮಿಕ, ಮತ್ತು ಚಾರಿಟಬಲ್ ಸಂಸ್ಥೆಗಳಿಗೆ ಭೂಮಿಯ ಗರಿಷ್ಠ ಮಿತಿಯನ್ನು 20 ಎಕರೆಗೆ, ಸಕ್ಕರೆ ಕಾರ್ಖಾನೆಗಳಿಗೆ 50 ಎಕರೆಗಳನ್ನು ಹೊಂದಲು ಅವಕಾಶ ಕಲ್ಪಿಸಿಕೊಟ್ಟಿದೆ.
10. ಗರಿಷ್ಠ ಭೂಮಿತಿಯಿಂದ ರಿಯಾಯಿತಿ ಪಡೆದ ಭೂಮಿಯೆಂದರೆ ಪ್ಲಾಂಟೇಷನ್‌ಗಳಾದ ಕಾಫಿ, ಟೀ, ರಬ್ಬರ್, ಕೋಕೋ, ಏಲಕ್ಕಿ, ಅಡಿಕೆ ಇತ್ಯಾದಿ ಭೂಮಿಗಳು ಹೊರತಾಗಿದ್ದವು.
11. ಕೃಷಿಕರಲ್ಲದವರು ಕೃಷಿ ಭೂಮಿ ಹೊಂದುವುದಕ್ಕೆ ನಿರ್ಬಂಧ ವಿಧಿಸಿತು. ಕೃಷಿಯೇತರ ಮೂಲಗಳಿಂದ ವಾರ್ಷಿಕ 12000/– ಅಧಿಕ ಆದಾಯವುಳ್ಳವರು ಕೃಷಿ ಖರೀದಿಸುವುದು ಮತ್ತು ದಾನ ಪಡೆಯುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಕೃಷಿಕರಲ್ಲದ ಅಥವಾ ಕೃಷಿ ಕಾರ್ಮಿಕರಲ್ಲದ ಆದರೆ ಕೃಷಿಯೇತರ ಮೂಲಗಳಿಂದ ವಾರ್ಷಿಕ 12000/– ಕಡಿಮೆ ಆದಾಯವುಳ್ಳವರು ಸ್ವಂತ ಕೃಷಿ ಮಾಡುವ ಉದ್ದೇಶದಿಂದ ಕೃಷಿಭೂಮಿಯನ್ನು ಅವಕಾಶ ಕಲ್ಪಿಸಿತು. ಹೀಗೆ ಭೂಮಿ ಖರೀದಿಸುವವರೂ ಸಹ ಸಂಬಂಧಪಟ್ಟ ಅಧಿಕಾರಿಗಳ ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಪಡೆದ ಭೂಮಿಯಲ್ಲಿ ಒಂದು ವರ್ಷದೊಳಗೆ ಸ್ವಂತ ಕೃಷಿ ಆರಂಭಿಸಿ ಅದನ್ನು 5 ವರ್ಷದವರೆಗೆ ಮುಂದುವರೆಸುವುದು ಕಡ್ಡಾಯವಾಗಿರುತ್ತದೆ.
12. ಗೇಣಿ ಘೋಷಿಸಿಕೊಂಡು ಪಡೆದ ಭೂಮಿಯನ್ನು ಕನಿಷ್ಠ 15 ವರ್ಷಗಳ ಕಾಲ ಮಾರಾಟ ಮಾಡಬಾರದು ಮತ್ತು ಮಾರಾಟ ಮಾಡುವುದು ಅನಿವಾರ್ಯವಾದರೆ ಸರ್ಕಾರದ ಗಮನಕ್ಕೆ ತಂದು ಈ ಹಿಂದೆ ತಾನು ಪಾವತಿಸಿದ ಪ್ರೀಮಿಯಂ ಮೊತ್ತವನ್ನು ಹಿಂದಕ್ಕೆ ಪಡೆದು ಮಾರಲು ಅವಕಾಶ ನೀಡಿದೆ.

1974ರ ಭೂಸುಧಾರಣಾ ಕಾಯ್ದೆ ಜಾರಿಗೆ ಬಂದ ಸಂದರ್ಭವನ್ನು ನೋಡುವುದಾದರೆ ಕರ್ನಾಟಕ ರಾಜ್ಯ ರಾಜಕೀಯದಲ್ಲಿ ಮೇಲ್ವರ್ಗದ ಜಾತಿಗಳ ಜಮೀನ್ದಾರ ಜನಪ್ರತಿನಿಧಿಗಳ ಬದಲಾಗಿ ಕೆಳವರ್ಗಗಳ ಅಸ್ಪೃಶ್ಯ ಜಾತಿಗಳ ಜನಪ್ರತಿನಿಧಿಗಳು ಮೇಲುಗೈ ಸಾಧಿಸಿ ಸ್ಥಾನವನ್ನು ಪಡೆಯುವಲ್ಲಿ ಯಶಸ್ವಿಯಾದವು. ಈ ಕಾಯ್ದೆ ಜಾರಿಗೆ ಬಂದಿದ್ದರಿಂದ ಕರ್ನಾಟಕದಲ್ಲಿ 1979ರ ವೇಳೆಗೆ 8,15,785 ಗೇಣಿದಾರರು ಅರ್ಜಿಸಲ್ಲಿಸಿದ್ದರೆ ಅವರಲ್ಲಿ 4,85.419 ಅರ್ಜಿದಾರರಿರು ಭೂ ಒಡೆತನ ಪಡೆದು ಉಳುವವರೆ ಭೂ ಒಡೆಯರಾದರು. ಈ ಕಾಯ್ದೆಯ ಪ್ರಕಾರ ರಾಜ್ಯದಲ್ಲಿ

ಗೇಣಿ ಭೂಮಿ, ಹೆಚ್ಚುವರಿ ಭೂಮಿಯೆಂದು ಘೋಷಿಸಲಾದ ಭೂಮಿಯ ಪ್ರಮಾಣ 2,94,152 ಎಕರೆಗಳು. ಆದರೆ ಅದರಲ್ಲಿ ಸರ್ಕಾರ ವಶಪಡಿಸಿಕೊಂಡ ಭೂಮಿಯ ಪ್ರಮಾಣ 1,54,293 ಎಕರೆಗಳು. ಅಂದರೆ ಶೇ.52ರಷ್ಟು ಭೂಮಿ ಸರ್ಕಾರದ ಕೈಸೇರಿತು. ಹೀಗೆ ಸ್ವಾಧೀನ ಪಡಿಸಿಕೊಂಡ ಭೂಮಿಯಲ್ಲಿ 1,04,437 ಎಕರೆಗಳಷ್ಟು ಭೂಮಿಯನ್ನು ಹಂಚಿಕೆ ಮಾಡಲಾಗಿದೆ. ಈ ಹಂಚಿಕೆ ಮಾಡಿರುವ ಭೂಮಿಯಲ್ಲಿ 63,891 ಎಕರೆಗಳು ರಾಜ್ಯದ ದಲಿತ ಮತ್ತು ಬುಡಕಟ್ಟು ಜನರಿಗೆ ಹಂಚಿಕೆಯಾಗಿದೆ.

## ಪರಾಮರ್ಶನ ಗ್ರಂಥಗಳು:


1. ಗರಣಿ ಎನ್ ಕೃಷ್ಣಮೂರ್ತಿ. (2024). ಭಾರತದ ಆರ್ಥಿಕತೆ. ಗರಣಿ ಪಬ್ಲಿಕೇಶನ್. ಬೆಂಗಳೂರು.
2. ಭೂ ಸುಧಾರಣಾ ಕಾಯ್ದೆಗಳು: 1955, 1961. 1974.1995 (ತಿದ್ದುಪಡಿ) 2015 (ತಿದ್ದುಪಡಿ). (2020). ಕರ್ನಾಟಕ ಸರ್ಕಾರ. ಬೆಂಗಳೂರು.
3. ಕಮತಿ ಸಿ. ಬಿ. (2019). ಸ್ವಾತಂತ್ರೋತ್ತರ ಭಾರತ. ನವಕರ್ನಾಟಕ ಪ್ರಕಾಶನ. ಬೆಂಗಳೂರು.
4. ಚಂದ್ರಪ್ಪ ಸಿ. (2012). ರೈತ ಮತ್ತು ಆದಿವಾಸಿ ಚಳುವಳಿ. ಮನೋಜ್ ಪಬ್ಲಿಕೇಷನ್ಸ್. ಬೆಂಗಳೂರು.
5. ಚಂದ್ರಶೇಖರ್ ಟಿ. ಆರ್. (2011). ಹಕ್ಕು-ಹಂಗು ಅಭಿವೃದ್ಧಿ ಅಧ್ಯಯನ ಆಯಾಮಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
6. ಚಂದ್ರ ಪೂಜಾರ್. (2010). ಯಾಕೀಗ ಭೂಮಿಯ ಪ್ರಶ್ನೆ?. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
7. ಗಂಗಾಧರಮೂರ್ತಿ ಆರ್. (2009). ನಾಗಸಂದ್ರ ಭೂ ಆಕ್ರಮಣ ಚಳುವಳಿ. ಸತ್ಯಶ್ರೀ ಪ್ರಿಂಟರ್ ಪ್ರೈವೆಟ್ ಲಿಮಿಟೇಡ್. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.